**ಅಸಲು ದಾವಾ ನಂಃ 107/2019**
**ಪಿ.ಡಬ್ಲ್ಯೂಃ 01**

**ದಿನಾಂಕಃ 11.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಜಿ.ಸಿ. ಎಂ . ಪ್ರತಿವಾದಿ ಪರ ವಕೀಲರಿಂದ**

ಪ್ರತಿವಾದಿಗಳು ಅವರ ಆದಾಯವನ್ನು ಮತ್ತು ನನ್ನಿಂದ ಪಡೆದ ಹಣವನ್ನು ದಾವಾ ಸ್ವತ್ತಿನ ಅಭಿವೃದ್ದಿಗಾಗಿ ವ್ಯಯಿಸಿದ್ದಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಗಳು 4 ಬೋರ್ ವೆಲ್ ಗಳನ್ನು ತೆಗೆಸಿ ಖುಷ್ಕಿ ಜಮೀನನ್ನು ನೀರಾವರಿ ಜಮೀನನ್ನಾಗಿ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿಯು ಸಾಲಕ್ಕಾಗಿ ಜಮೀನನ್ನು ಮಾರಾಟ ಮಾಡುವುದಾಗಿ ಹೇಳಿದ್ದರು ಎಂದು ನುಡಿಯುತ್ತಾರೆ. ನನ್ನಿಂದ ಸಾಲ ಪಡೆದ ನಂತರ ದಾವಾ ಸ್ವತ್ತನ್ನು ಪ್ರತಿವಾದಿಗಳು ಜಮೀನನ್ನು ನೀರಾವರಿ ಜಮೀನನ್ನಾಗಿ ಮಾಡಿದ್ದರು ಎಂದರೆ ಸುಳ್ಳು. ಪ್ರತಿವಾದಿಗಳು ನನ್ನಿಂದ ಪಡೆದುಕೊಂಡ ಸಾಲದ ಭದ್ರತೆಗಾಗಿ ನಿಪಿ.1 ನ್ನು ಬರೆದುಕೊಟ್ಟಿದ್ದರು ಎಂದರೆ ಸುಳ್ಳು. ಪ್ರತಿವಾದಿಗಳು ಕೃಷಿ ಕಾರ್ಮಿಕರಾಗಿದ್ದ ಕಾರಣ ದಾವಾ ಸ್ವತ್ತನ್ನು ಮಾರಾಟ ಮಾಡುವ ಇಚ್ಚೆ ಹೊಂದಿಲ್ಲ ಎಂದರೆ ಸುಳ್ಳು .

ನಮ್ಮ ಅಂಗಡಿಯಲ್ಲಿ 4,50,000/- ರೂ.ಗಳಿಗೆ ದಾವಾ ಸ್ವತ್ತಿನ ಕ್ರಯದ ಮಾತುಕತೆಯಾಗಿತ್ತು. ಕಾಳಪ್ಪನ ಕಾಂಪೌಂಡ್ ನಲ್ಲಿ ಟೈಪಿಸ್ಟ್ ದಯಾನಂದ ಇವರ ಅಂಗಡಿಯಲ್ಲಿ ಕ್ರಯದ ಕರಾರು ಪತ್ರವನ್ನು ತಯಾರು ಮಾಡಲಾಯಿತು. ನಮ್ಮ ಅಂಗಡಿಯಲ್ಲಿ ಮಾತುಕತೆ ಮುಗಿಸಿಕೊಂಡು ಕಾಳಪ್ಪನ ಕಾಂಪೌಂಡ್ ನಲ್ಲಿ ಕ್ರಯದ ಕರಾರು ಪತ್ರ ಮಾಡಿಕೊಂಡೆವಾ ಎಂದರೆ ಹೌದು. ಸದರಿ ಸಂದರ್ಬದಲ್ಲಿ ಚಂದ್ರಣ್ಣ ಇದ್ದರು. ಸದರಿ ಕರಾರು ಪತ್ರ ಮಾಡಿಕೊಂಡ ದಿನವೇ ಕ್ರಯದ ಬಾಬ್ತನ್ನು ಕೊಟ್ಟಿರುತ್ತೇನೆ. 4,25,000/- ರೂ ಕೊಟ್ಟಿರುತ್ತೇನೆ. 25,000/- ಕೊಡುವುದು ಬಾಕಿ ಇತ್ತು . ನಾನು ನಿಪಿ.1 ನ್ನು ಓದಿ ಸಹಿ ಮಾಡಿದ್ದೇನೆ. ನಿಪಿ.1 ರಲ್ಲಿ ಮೊದಲನೇ ಪುಟದಲ್ಲಿ 4 ಕಡೆ ವೈಟನರ್ ಹಾಕಲಾಗಿದೆ ಎಂದರೆ ಅದರ ಸಂಬಂದ ಷರಾ ಹಾಕಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಷರಾ ಈ ಪುಟದ 5 ನೇ ಪಂಕ್ತಿಯಲ್ಲಿ ತಿದ್ದಿ ಬರೆದಿದೆ ಎಂದು ಇದ್ದು ವೈಟನರ್ ಹಾಕಿರುವ ಮಾಹಿತಿಗೆ ಷರಾ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಅದೇ ಷರಾ ಎನ್ನುತ್ತಾರೆ. ನಿಪಿ.1 ರ 2 ನೇ ಪುಟದಲ್ಲಿ 5,000/- ಕೊಡುವುದು ಬಾಕಿ ಇದೆ ಎಂದು ನಮೂದು ಇದೆ. ಪ್ರತಿವಾದಿಗಳು ಸದರಿ ಪತ್ರ ಬರೆದ ದಿನವೇ ಹಣದ ಭದ್ರತೆಗಾಗಿ ಪತ್ರ ಬರೆದು ಕೊಟಿಟದ್ದು ಅದು ಕ್ರಯದ ಕರಾರು ಪತ್ರ ಅಲ್ಲ ಆದದರಿಂದ ಸಹಿ ಮಾಡುವುದಿಲ್ಲ ಎಂದು ನಿರಾಕರಿಸಿದ್ದರು ಎಂದರೆ ಸುಳ್ಳು. ಆಗ ನಾನು ಹಣ

ಕೊಟ್ಟ ನಂತರ ಕರರು ಪತ್ರವನ್ನು ರದ್ದು ಮಾಡುತ್ತೇನೆ ಎಂದು ಹೇಳಿದ್ದೆ ಎಂದರೆ ಸುಳ್ಳು.  ನನ್ನಮೇಲೆ

ನಂಬಿಕೆ ಇಟ್ಟು ಪ್ರತಿವಾದಿಗಳು ಸದರಿ ಕರಾರು ಪತ್ರವನ್ನು ನೊಂದಣಿ ಮಾಡಿಸಿಕೊಟ್ಟರು ಎಂದರೆ ಸುಳ್ಳು. ಸದರಿ ಕರಾರು ಪತ್ರದ ದುರ್ಲಾಬ ಪಡೆದುಕೊಂಡು ದಾವಾ ಸ್ವತ್ತನ್ನು ಲಪಟಾಯಿಸುವ ದುರುದ್ದೇಶದಿಂದ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ನಿಪಿ.1 ಕ್ಕೆ ಸಾಕ್ಷಿಯಾಗಿ ಚಂದ್ರಪ್ಪ ಮತ್ತು ಪವನ್ ಸಹಿ ಮಾಡಿದ್ದಾರೆ. ನಿಪಿ.1 ರ 3 ನೇ ಪಟದ ಹಿಂಭಾಗದಲ್ಲಿರುವ ಗುರುತುಬಲ್ಲವರ ಸಹಿಗಳು ಎಂದು ಸಾಕ್ಷಿ ಗುರುತಿಸುತ್ತಾರೆ. ಸಾಕ್ಷಿದಾರರಾಗಿ ಪವನ್ ಎನ್ನುವವರು ಸಹಿ ಮಾಡಿದ್ದು ಮತ್ತೊಬ್ಬ ಸಾಕ್ಷಿದಾರರು ಸಹಿ ಮಾಡಿದ್ದು ಅವರು ನನಗೆ ಗೊತ್ತಿಲ್ಲ ಮತ್ತು ಅವರ ಪರಿಚಯ ಇರುವುದಿಲ್ಲ. ಪವನ್ ಇವರು ಗುರುತುಬಲ್ಲ ಸಾಕ್ಷಿಯಾಗಿ ಮತ್ತು ಪತ್ರಕ್ಕೆ ಸಾಕ್ಷಿದಾರರಾಗಿ ಎರಡೂ ಕಡೆ ಸಹಿ ಮಾಡಿದ್ದಾರೆ. ಸದರಿ ಎರಡೂ ಕಡೆ ಪವನ್ ಎಂಬುವ ವ್ಯಕ್ತಿಯ ಸಹಿಗಳು ಬೇರೆ ಬೇರೆ ಇವೆ ಎಂದರೆ ಸಾಕ್ಷಿಯು ಬೇರೆ ಬೇರೆ ರೀತಿಯಾಗಿ ಮಾಡಿರಬಹುದು ಎಂದು ನುಡಿಯುತ್ತಾರೆ. ನಾನು ಮತ್ತು ಸದರಿ ಸಾಕ್ಷಿದಾರರು ಸೇರಿ ನಿಪಿ.1 ನ್ನು ಸೃಷ್ಟಿಸಿದ್ದೇವೆ ಎಂದರೆ ಸುಳ್ಳು. ಚಂದ್ರಣ್ಣ ಇವರು ನಿಪಿ.1 ಕ್ಕೆ ಸಾಕ್ಷಿಯಾಗಿ ಸಹಿ ಮಾಡಿಲ್ಲ ಎಂದರೆ ಸುಳ್ಳು . ಸದರಿ ಚಂದ್ರಣ್ಣ ಸುಮಾರು 12-13 ವರ್ಷಗಳಿಂದ ಪರಿಚಯ ಇದ್ದಾರೆ. ನಾವಿಬ್ಬರು ವಿಶ್ವಾಸಿಗರು ಎಂದರೆ ಸರಿ.

ನಿಪಿ.1 ಕ್ಕೆ ಛಾಪಾ ಕಾಗದವನ್ನು 1 ನೇ ಪ್ರತಿವಾದಿ ತಂದಿರುತ್ತಾರೆ. 2 ರೂ. ಗಳ 4 ಛಾಪಾ ಕಾಗದವನ್ನು ತಂದಿರುತ್ತಾರೆ. ನಿಪಿ.1 ಪತ್ರ ತಯಾರಿಸಲು 1ನೇ ಪ್ರತಿವಾದಿ ಮತ್ತು ಚಂದ್ರಣ್ಣ ಮಾಹಿತಿ ಕೊಟ್ಟಿರುತ್ತಾರೆ. ಚಂದ್ರಣ್ಣನಿಗೂ ದಾವಾ ಸ್ವತ್ತಿಗೂ ಸಂಬಂದ ಇಲ್ಲ ಎಂದರೆ ಸರಿ. ಸದರಿ ಸಮಯದಲ್ಲಿ ನಿಪಿ.1 ನ್ನು ತಯಾರಿಸುವಾಗ 1 ನೇ ಪ್ರತಿವಾದಿಯ ಜೊತೆ ಸುಶೀಲಮ್ಮ , ಅಜ್ಜಪ್ಪ , ಚಂದ್ರಣ್ಣ , ವೀರಭದ್ರಪ್ಪ ತಿಪ್ಪೇರುದ್ರಪ್ಪ , ಪವನ್ ಮತ್ತು ಇನ್ನೊಬ್ಬ ಸಾಕ್ಷಿದಾರ ಇದ್ದರು. ಸದರಿ ಇನ್ನೊಬ್ಬ ಸಾಕ್ಷಿದಾರರನ್ನು ಪ್ರತಿವಾದಿಗಳು ಕರೆದುಕೊಂಡು ಬಂದಿದ್ದರು. ನಿಪಿ.1 ನ್ನು ತಯಾರಿಸುವ ಕಾಲಕ್ಕೆ ಪ್ರತಿವಾದಿಗಳು ಪಹಣಿಗಳನ್ನು ತಂದಿದ್ದರು. ಅದನ್ನು ಹೊರತುಪಡಿಸಿ ಬೇರೆ ದಾಖಲಾತಿ ತಂದಿರಲಿಲ್ಲ. ನಿಪಿ.1 ನ್ನು ತಯಾರಿಸುವಾಗ ಪ್ರತಿವಾದಿಗಳು ಹಾಜರಿರಲಿಲ್ಲ ಹಾಗೂ ನಾನು, ಚಂದ್ರಣ್ಣ ಸಾಕ್ಷಿದಾರರ ಸಹಿ ಪಡೆದು ನಿಪಿ.1 ಸೃಷ್ಟಸಿದ್ದೇವೆ ಎಂದರೆ ಸರಿಯಲ್ಲ.

ಶೇಃ 95 ರಷ್ಟು ಕ್ರಯದ ಬಾಬ್ತನ್ನು ಕೊಟ್ಟಿರುವ ಕಾರಣ ಪ್ರತಿವಾದಿಗಳಿಗೆ ದಾವಾ ಸ್ವತ್ತಿನ ಕಬ್ಜೆಯನ್ನು ಕೊಡಲು ಕೇಳಿದ್ದೆನಾ ಎಂದರೆ ಸಾಕ್ಷಿಯು ನೊಂದಣಿಯಾಗದೇ ಕೇಳಲು ಬರುವುದಿಲ್ಲ ಎನ್ನುತ್ತಾರೆ. ನಾನು ನಿಪಿ.1 ರಲ್ಲಿ ಪೂರ್ತಿ ಜಮೀನನ್ನು ಕೊಂಡು ಕೊಳ್ಳುವುದಾಗಿ ನಮೂದಿಸಿದ್ದೇನೆ ಎಂದರೆ ಸರಿ . ದಾವಾ ಸ್ವತ್ತು ದುರಸ್ಥಿಯಾಗಿ ಸರ್ವೆ ನಂಬರ್ 8/1 ಎಂದು ಇರುತ್ತದೆ ಎಂದರೆ ಸಾಕ್ಷಿಯು ಪ್ರತಿವಾದಿಗಳು ಹಳೆಯ ದಾಖಲಾತಿ ಇವೆ ಎಂದು ತಿಳಿಸಿದ್ದರು ಎಂದು ನುಡಿಯುತ್ತಾರೆ. ಪೂರಾ ಸರ್ವೆ ನಂಬರ್ ಇದ್ದ ಕಾರಣ ಕ್ರಯಪತ್ರ ಮಾಡಿಸಿಕೊಳ್ಳಲು ಸರ್ವೆ ಸ್ಕೆಚ್ ನ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಲದ ಭದ್ರತೆಗಾಗಿ ನಿಪಿ.1 ನ್ನು ಬರೆಸಿಕೊಂಡ ಕಾರಣ ನಾನು ದಾವಾ ಸ್ವತ್ತಿನ ಸಾದೀನವನ್ನು ಕೇಳಿರಲಿಲ್ಲ ಎಂದರೆ ಸುಳ್ಳು.

ನಾನು ಪ್ರತಿವಾದಿಗಳಿಗೆ ನೋಟೀಸ್ ಕೊಟ್ಟ ನಂತರ ಪ್ರತಿವಾದಿಗಳು ನನ್ನ ಬಳಿ ಬಂದಿದ್ದು ಆಗ ನಾನು ಪೂರ್ತಿ ಹಣ ಕೊಟ್ಟಲ್ಲಿ ಪತ್ರ ವಾಪಾಸ್ ಕೊಡುವುದಾಗಿ ಹೇಳಿದ್ದೆ ಎಂದರೆ ಸರಿಯಲ್ಲ. ಆದರಿಂದ ಪ್ರತಿವಾದಿಗಳು ನಾನು ಕೊಟ್ಟ ನೋಟೀಸ್ ಗೆ ಪ್ರತ್ಯುತ್ತರ ಕೊಟ್ಟಿಲ್ಲ ಎಂದರೆ ಸುಳ್ಳು. 2013 ರಲ್ಲಿ ನಿಪಿ.1 ನ್ನು ಬರೆಯಲಾಗಿದೆ. ನಿಪಿ.1 ಪತ್ರವನ್ನು ಬರೆದ ನಂತರ 3 ತಿಂಗಳಿನಿಂದ 6 ತಿಂಗಳವರೆಗೆ ಕ್ರಯ ಪತ್ರವನ್ನು ಮಾಡಿಕೊಡುವಂತೆ ಪ್ರತಿವಾದಿಗೆ ಕೇಳಿರುತ್ತೇನೆ. 2013 ರಿಂದ ನಾನು ನೋಟೀಸ್ ಕೊಡುವವರೆಗೂ ಪ್ರತಿವಾದಿಗಳಿಗೆ ಕ್ರಯ ಪತ್ರ ಮಾಡಿ ಕೊಡುವಂತೆ ಕೇಳಿರುತ್ತೇನೆ. 6 ತಿಂಗಳ ನಂತರ ಕ್ರಯ ಪತ್ರ ಮಾಡಿಕೊಡಲು ಕೇಳಿದಾಗ ಪ್ರತಿವಾದಿಗಳು ಅವರ ಮಗಳಿಗೆ ತೊಂದರೆ ಇದೆ ಸರಿ ಮಾಡಿಕೊಂಡು ಕ್ರಯ ಪತ್ರ ಮಾಡಿಕೊಡುವುದಾಗಿ ಹೇಳಿದ್ದರು. ಅಂದರೆ ನನಗೆ ಪ್ರತಿವಾದಿಗಳಿಗೆ ಮಗಳಿರುವ ವಿಚಾರ ಪತ್ರ ಬರೆದು 6 ತಿಂಗಳ ನಂತರ ಗೊತ್ತಾಯಿತು. ನಿಪಿ.1 ನ್ನು ಬರೆಯುವಾಗಲೇ ಪ್ರತಿವಾದಿಯವರಿಗೆ ಮಗಳಿರುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸುಳ್ಳು . ಅವರ ಮಗಳು ನಿಪಿ.1 ನ್ನು ಬರೆದುಕೊಟ್ಟಿಲ್ಲ ಎಂದರೆ ಸರಿ. ಅವರ ಮಗಳು ಈವರೆಗೂ ನಿಪಿ.1 ಸಮ್ಮತಿ ಕೊಟ್ಟಿಲ್ಲವಾ ಎಂದರೆ ಗೊತ್ತಿಲ್ಲ.

ನಾನು ನಿಪಿ.1 ನ್ನು ಮಾಡಿ ಕೊಡುವ ಕಾಲಕ್ಕೆ ಪಾಲು ವಿಭಾಗ ಪತ್ರದ ಮೂಲಕ ದಾವಾ ಸ್ವತ್ತು ಪ್ರತಿವಾದಿಗಳಿಗೆ ಬಂದಿತ್ತು ಎಂದು ತಿಳಿದಿತ್ತು ಎಂದರೆ ಸರಿ. ಆದ್ದರಿಂದ ಪ್ರತಿವಾದಿಗಳ ಮಗಳಿಗೂ ಸಹಾ ದಾವಾ ಸ್ವತ್ತಿನಲ್ಲಿ ಹಕ್ಕಿದೆ ಎಂದರೆ ನನಗೆ ಗೊತ್ತಿಲ್ಲ. ಕಾಲಮಿತಿ ಮೀರಿದ ನಂತರ ದಾವೆ ಮಾಡಿದ್ದೇನೆ ಎಂದರೆ ಸುಳ್ಳು. ನಾನು 3 ತಿಂಗಳಿಗೆ 6 ತಿಂಗಳಿಗೆ ಕ್ರಯ ಪತ್ರ ಮಾಡಿಕೊಡುವಂತೆ

ಪ್ರತಿವಾದಿಗಳಿಗೆ ಕೇಳಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಣಕಾಸಿನ ವ್ಯವಹಾರ ಆಗಿದ್ದ ಕಾರಣ ಈ ವರೆಗೂ ಪ್ರತಿದಿವಾಗಳಿಗೆ ಕ್ರಯಪತ್ರ ಮಾಡಿಕೊಡುವಂತೆ ಕೇಳಿಲ್ಲ ಮತ್ತು ಅವರು ನಿರಾಕರಿಸಿಲ್ಲ ಎಂದರೆ ಸುಳ್ಳು. ಸಾಲದ ಭದ್ರತೆಗಾಗಿ ನಿಪಿ.1 ನ್ನು ಬರೆದುಕೊಟ್ಟಿರುವ ಕಾರಣ ನನಗೆ ಕ್ರಯ ಪತ್ರ ಬರೆದುಕೊಡುವ ಬಾದ್ಯಸ್ಥಿಕೆಯನ್ನು ಪ್ರತಿವಾದಿಗಳು ಹೊಂದಿಲ್ಲ ಎಂದರೆ ಸುಳ್ಳು. ಈ ದಾವೆ ಹಾಕಿದ ನಂತರವೂ ಸಹಾ ಅವರು ಪಡೆದುಕೊಂಡಿದ್ದ ಸಾಲವನ್ನು ಬಡ್ಡಿ ಸಮೇತ ಕೊಡುವುದಕ್ಕೆ ಒಪ್ಪಿದ್ದರು ಸಹಾ ನಾನು ತಿರಸ್ಕರಿಸಿದ್ದೇನೆ ಎಂದರೆ ಸುಳ್ಳು . ಕಾ ಲಾ ಕಾಲಕ್ಕೆ ಮಳೆಯಾಗದೇ ಇರುವ ಕಾರಣ ಮತ್ತು ಬೆಳೆಗೆ ಸೂಕ್ತ ಬೆಲೆ ಸಿಗದ ಕಾರಣ ಪ್ರತಿವಾದಿಗಳು ಸಾಲವನ್ನು ಸೂಕ್ತ ಸಮಯದಲ್ಲಿ ನನಗೆ ಹಿಂದಿರುಗಿಸಲು ಆಗಿಲ್ಲ ಎಂದರೆ ಸುಳ್ಳು. ರಾಗಲೂ ಸಹಾ ಪ್ರತಿವಾದಿಗಳು ಹಣ ಹಿಂದಿರುಗಿಸಲು ತಯಾರಿದ್ದಾರೆ ಎಂದರೆ ನನಗೆ ಒಪ್ಪಿಗೆ ಇಲ್ಲ. ನಾನು ನೋಂದಾಯಿತ ಕರಾರು ಪತ್ರವನ್ನು ಹೊಂದಿರುವ ಕಾರಣ ದಾವಾ ಸ್ವತ್ತನ್ನು ಲಪಾಟಾಯಿಸುವ ಉದ್ದೇಶ ಹೊಂದಿದ್ದೇನೆ ಎಂದರೆ ಸುಳ್ಳು. ನಾನು ಸುಳ್ಳು ದಾವೆ ಹೂಡಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.